**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 50 ಸಂಕೋಶ 2004

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 30ನೇ ಜೂನ್ 2004.

**ಸುತ್ತೋಲೆ**

**ವಿಷಯ :** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999- ಕಲಂ 4(ಜಿ) ರಡಿ ವಿನಾಯ್ತಿ ಬಗ್ಗೆ - ವಿನಾಯ್ತಿ ನೀಡುವಲ್ಲಿ ತಡೆಹಿಡಿಯಲು ಕ್ರಮ.

ಸರ್ಕಾರದ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ಸಂಗ್ರಹಣೆ ಪ್ರಾಧಿಕಾರಗಳಲ್ಲಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನ್ನು ಸರ್ಕಾರವು ಜಾರಿಯಲ್ಲಿ ತಂದಿರುತ್ತದೆ. ಈ ಅಧಿನಿಯಮದನ್ವಯ ಯಾವುದೇ ಸಂಗ್ರಹಣಾ ಸಂಸ್ಥೆಯು ಟೆಂಡರು ಪ್ರಕ್ರಿಯೆಯಿಲ್ಲದೆ ಸಾಮಗ್ರಿ, ಸೇವೆಗಳನ್ನು ಪಡೆಯತಕ್ಕದ್ದಲ್ಲ.

ಕಾಮಗಾರಿ, ಸಾಮಗ್ರಿ ಹಾಗೂ ಸೇವೆಗಳ ಸಂಗ್ರಹಣೆಯಲ್ಲಿ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರಲ್ಲಿ ನಿಗದಿಪಡಿಸಲಾದ ವಿಧಾನವನ್ನು ಪಾಲಿಸಬೇಕಾಗಿದೆ.

ಅಧಿನಿಯಮದ 4ನೆಯ ಕಲಮಿನಡಿ ವಿಶಿಷ್ಟ ಸಂದರ್ಭಗಳಲ್ಲಿ ಅಧಿನಿಯಮದ ಉಪ ಬಂಧಗಳನ್ನು ಅನ್ವಯಿಸುವುದಕ್ಕೆ ವಿನಾಯ್ತಿ ನೀಡಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ 4(ಜಿ) ಕಲಮಿನನ್ವಯ ವಿನಾಯಿತಿ ನೀಡಲು ಇಲಾಖೆಗಳು ಆರ್ಥಿಕ ಇಲಾಖೆಗೆ ಪ್ರಸ್ತಾವನೆಗಳನ್ನು ಸಹಜವಾಗಿ ಕಳುಹಿಸುತ್ತಿರುವುದನ್ನು ಗಮನಿಸಿಲಾಗಿದೆ. ಈ ರೀತಿ ವಿನಾಯಿತಿಗಳನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲವಲ್ಲದೇ ಅವುಗಳನ್ನು ಹಂತ ಹಂತವಾಗಿ ಮುಕ್ತಾಯಗೊಳಿಸುವ ಅವಶ್ಯಕತೆ ಇದೆ. ವಿಶ್ವಬ್ಯಾಂಕ್ ಸಹಾ ಸಾರ್ವಜನಿಕ ಸಂಗ್ರಹಣೆ ಪ್ರಕ್ರಿಯೆಯಲ್ಲಿಯ ಸುಧಾರಣೆಗಳನ್ನು ಗಮನಿಸುತ್ತಿದೆ. ಸಂಗ್ರಹಣೆಯಲ್ಲಿ ಪ್ರಾಶಸ್ತ್ಯ ಹಾಗೂ ವಿನಾಯಿತಿಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮದ ಉದ್ದೇಶವನ್ನು ವಿಫಲಗೊಳಿಸುತ್ತವೆ ಎಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ಕಾರಣ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಿಂದ ವಿನಾಯಿತಿ ಕೋರುವ ಯಾವುದೇ ಪ್ರಸ್ತಾವನೆಯನ್ನು ಪರಿಗಣಿಸಕೂಡದೆಂದು ನಿರ್ಧರಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಿಂದ ವಿನಾಯಿತಿ ಕೋರಿ ಯಾವುದೇ ಪ್ರಸ್ತಾವನೆಯನ್ನು ಕಳುಹಿಸಬಾರದೆಂದು ಅಲ್ಲದೆ ತಮ್ಮ ಅಧೀನದಲ್ಲಿಯ ಇಲಾಖೆಗಳು/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಎಲ್ಲ ಸಂಗ್ರಹಣೆಗಳಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಉಪ ಬಂಧಗಳನ್ನು ಪಾಲಿಸುವಂತೆ ಖಚಿತಪಡಿಸುವಂತೆಯೂ ಕೋರಲಾಗಿದೆ.

**ಕೆ.ಪಿ. ಪಾಂಡೆ**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಹಾಗೂ ಪ್ರಧಾನ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ.